ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 93

ಮಾನ್ಯ ಸದಸ್ಯರ ಹೆಸರು : ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು)

ವಿಷಯ : ರಾಯಚೂರಿನ ಪ್ರಾಚೀನ ಕೋಟೆ ಅಭಿವೃದ್ಧಿ ಬಗ್ಗೆ.

ಉತ್ತರಿಸುವ ದಿನಾಂಕ : 15-07-2019

ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಹಾಗೂ ರೇಷ್ಮೆ ಇಲಾಖೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಯಚೂರಿನ ಪ್ರಾಚೀನ ಕೋಟೆ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ಸದರಿ ಕೋಟೆಯ ಅಭಿವೃದ್ಧಿಗೆ 2015-16ನೇ ಸಾಲಿನಲ್ಲಿ ನಾಲ್ಕು ಕೋಟಿ ರೂಪಾಯಿಗಳು ಮಂಜೂರಾಗಿದ್ದು, ಅದನ್ನು ಉಪಯೋಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು;	ಬಂದಿದೆ. ರಾಯಚೂರು ನಗರದಲ್ಲಿರುವ ಪುರಾತನ ಕೋಟೆಯನ್ನು ಪುನಶ್ಚೇತನಗೊಳಿಸಿ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ರೂ.450.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆ, ರಾಯಚೂರು ರವರ ಮೂಲಕ ಕೈಗೊಳ್ಳಲು ಸರ್ಕಾರ ದಿನಾಂಕ 30-03-2016ರ ಆದೇಶದಲ್ಲಿ ಅನುಮೋದನೆ ನೀಡಿರುತ್ತದೆ. ಈ ಸಂಬಂಧ ರೂ.200.00 ಲಕ್ಷಗಳನ್ನು ಜಿಲ್ಲಾಧಿಕಾರಿ, ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ರಾಯಚೂರು ರವರಿಗೆ ಬಿಡುಗಡೆ ಮಾಡಲಾಗಿದೆ. ಲೋಕೋಪಯೋಗಿ ಇಲಾಖೆ ಅಂದಾಜು ಪಟ್ಟಿಯನ್ನು ತಯಾರಿಸಿ, ಟೆಂಡರ್ ಕರೆದು ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಿರುತ್ತಾರೆ. ಈ ಸಂದರ್ಭದಲ್ಲಿ ಪುರಾತತ್ವ ಸಂರಕ್ಷಣಾ ಇಲಾಖೆ ವತಿಯಿಂದ ಕಾಮಗಾರಿಯನ್ನು ತಪಾಷಣೆ ನಡೆಸಿ ಅಂದಾಜುಪಟ್ಟಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಅಳವಡಿಸಿಕೊಂಡಿರುವ ಬಾಬತ್ತುಗಳನ್ನು ಪರಿಶೀಲಿಸಿ ಮೇಲ್ಕಂಡ ಉಲ್ಲೇಖದ ತಪಾಸಣಾ ವರದಿಯನ್ನು ನೀಡಿರುತ್ತಾರೆ. ಅವರ ವರದಿಯಲ್ಲಿ ಕೋಟೆಯ ಸಂರಕ್ಷಣೆಯ ಬಗ್ಗೆ ಒತ್ತು ನೀಡಿದ್ದು ಕೆಳಗಿನ ನ್ಯೂನ್ಯತೆಗಳನ್ನು ಗಮನಿಸಿ ಪುರಾತತ್ವ ಇಲಾಖೆ ರವರು ಸೂಚನೆ ನೀಡಿರುತ್ತಾರೆ. 1. ಸಿಮೆಂಟ್‌ಗಾರೆ ಬಳಸಿ ಕಟ್ಟಡ ನಿಮಿಸಿರುವುದು. 2. ಕೋಟೆ ನಿರ್ಮಿಸಲು ಬಳಸಲಾಗುತ್ತಿರುವ ಕಲ್ಲುಗಳು 3. ನಾವು ನಿರ್ಮಾಣ ಮಾಡುತ್ತಿರುವ ಕಟ್ಟಡವು ಮೂಲ ವಿನ್ಯಾಸಕ್ಕೆ ಹೊಂದಾಣಿಕೆಯಾದಗೆ ಕೋಟೆಯ ಮೂಲಸ್ವರೂಪದಲ್ಲಿ ವ್ಯತ್ಯಾಸವಾಗಿರುವುದು. 4. ವಿದ್ಯುತ್ ದೀಪಗಳನ್ನು ಅಳವಡಿಸಿರುವ ಬಗ್ಗೆ ಆಕ್ಷೇಪಣಾ ಮಾಡಿರುತ್ತಾರೆ.

ಕ್ರ. ಸಂ.	ಪ್ರಶ್ನೆ	ಉತ್ತರ
		ಅವರ ಸಲಹೆ ಮತ್ತು ಸೂಚನೆಗಳಂತೆ ಕಾಮಗಾರಿ ನಿರ್ವಹಿಸಲು ಲೋಕೋಪಯೋಗಿ ಇಲಾಖೆಯು ತಯಾರಿಸಿರುವ ಅಂದಾಜು ಪಟ್ಟಿಯಲ್ಲಿ ಅವಕಾಶವಿರುವುದಿಲ್ಲ ಮತ್ತು ಆ ರೀತಿಯಾಗಿ ಕೆಲಸ ನಿರ್ವಹಿಸಲು ನುರಿತ ಕೆಲಸಗಾರರು ಲಭ್ಯವಿರುವುದಿಲ್ಲ. ಪುರಾತತ್ವ ಇಲಾಖೆ ಸೂಚಿಸಿರುವಂತೆ ಕೋಟೆಯ ಸಂರಕ್ಷಣೆಯ ಮೂಲವಿನ್ಯಾಸಕ್ಕೆ ಧಕ್ಕೆಯಾಗದಂತೆ ಕೋಟೆಯನ್ನು ನಿರ್ಮಿಸಿದ್ದಲ್ಲಿ ಅದರ ಅಂದವು ಹೆಚ್ಚಾಗುವುದಲ್ಲದೆ ಅದರ ಮಹತ್ವ ಹೆಚ್ಚಾಗುತ್ತದೆ. ಈ ಕಾರಣಗಳಿಂದ ಕಾಮಗಾರಿಯನ್ನು ಪುರಾತತ್ವ ಇಲಾಖೆಯ ಸಲಹೆ ಹಾಗೂ ಮಾರ್ಗದರ್ಶನದಲ್ಲಿ ನಿರ್ಮಿಸುವುದು ಅತ್ಯವಶ್ಯಕ. ಆದುದರಿಂದ ಈ ಕಾಮಗಾರಿಯನ್ನು ಪುರಾತತ್ವ ಹಾಗೂ ವಸ್ತುಸಂಗ್ರಹಾಲಯ ಇಲಾಖೆಯ ವತಿಯಿಂದ ನಿರ್ಮಿಸುವುದು ಸೂಕ್ತವೆಂದು ಅಭಿಪ್ರಾಯಿಸಿದೆ. ಈ ಕಾಮಗಾರಿಯನ್ನು ಪುರಾತತ್ವ ಇಲಾಖೆಯ ವತಿಯಿಂದ ನಿರ್ಮಿಸಲು ಒಪ್ಪಿಗೆ ನೀಡಿದಲ್ಲಿ ಕಾಮಗಾರಿಯನ್ನು ಅವರಿಗೆ ವಹಿಸುವುದು ಸೂಕ್ತವಾಗಿರುತ್ತದೆ ಎಂದು ದಿನಾಂಕ: 14/06/2017ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಯಚೂರು ರವರು ಪತ್ರದಲ್ಲಿ ತಿಳಿಸಿರುತ್ತಾರೆ. ಅದರಂತೆ ಮೇಲ್ಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ, ರಾಯಚೂರು ರವರ ಬದಲಾಗಿ ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರಾ ಇಲಾಖೆ ರವರ ಮೂಲಕ ಕೈಗೊಳ್ಳಲು ದಿನಾಂಕ:05-03-2019ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ. ಅದರನ್ವಯ ರೂ.450.00 ಲಕ್ಷಗಳ ಅಂದಾಜುಪಟ್ಟಿಯನ್ನು ಸಲ್ಲಿಸುವಂತೆ ಪುರಾತತ್ವ ಇಲಾಖೆ, ಮೈಸೂರು ರವರಿಗೆ ದಿನಾಂಕ: 23/03/2019 ರಂದು ಪತ್ರ ಬರೆಯಲಾಗಿದೆ. ಅಂದಾಜು ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸಿದ ಕೂಡಲೇ ಅಗತ್ಯ ಕ್ರಮ ವಹಿಸಲಾಗುವುದು.
ಆ)	2019-20ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಗೆ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾಗಿರುವ ಅನುದಾನ ಎಷ್ಟು?	ರಾಯಚೂರು ಜಿಲ್ಲೆಗೆ ಪ್ರವಾಸೋದ್ಯಮ ಇಲಾಖೆಯಿಂದ 2019-20ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ ರೂ.375.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ. ಕಾಮಗಾರಿಗಳ ಪ್ರಗತಿಗನುಗುಣವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

ಪ್ರಇ 06 ಪ್ರವಾವಿ 2019

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು